## ಟಾಪ್ ನ್ಯೂಸ್

ಚಿಕ್ಕಬಳ್ಳಾಪುರ: ಅತಿಥಿ ಉಪನ್ಯಾಸಕರ ಬೇಡಿಕೆ ಈಡೇರಿಸುವಲ್ಲಿ ಹಾಗೂ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳದಿದ್ದರೆ ಜಿಲ್ಲಾಧಿಕಾರಿ ಕಚೇರಿ ಬಳಿ ಜ.12ರಿಂದ ಅನಿರ್ದಿಷ್ಟಾವಧಿ ಧರಣಿ ಕೈಗೊಳ್ಳುವುದಾಗಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಅತಿಥಿ ಉಪನ್ಯಾಸಕರ ಸಂಘ ಸರ್ಕಾರಕ್ಕೆ ಎಚ್ಚರಿಕೆ ನೀಡಿದೆ. ನಗರದಲ್ಲಿ ಆಯೋಜಿಸಿದ್ದ ಸುದ್ದಿಗೋಷ್ಠಿಯಲ್ಲಿ ಸಂಘದ ರಾಜ್ಯ ಸಂಘಟನಾ ಕಾರ್ಯದರ್ಶಿ ಫಯಾಜುಲ್ಲಾ ಮಾತನಾಡಿ, ಅತಿಥಿ ಉಪನ್ಯಾಸಕರ ಬೇಡಿಕೆ ಈಡೇರಿಸುವಲ್ಲಿ ಹಾಗೂ ಸಮಸ್ಯೆ ಪರಿಹರಿಸುವಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉನ್ನತ ಶಿಕ್ಷಣ ಸಚಿವರು ನಿರ್ಲಕ್ಷ್ಯ ತೋರಿದ್ದಾರೆ ಎಂದು ದೂರಿದರು.

ಯಾವುದೇ ಕುಂದು-ಕೊರತೆ ಬಗ್ಗೆ ನಮಗೆ ಬರೆದು ಕಳುಹಿಸಬಹುದು. ಬರವಣಿಗೆ ಸ್ಫುಟವಾಗಿರಲಿ. ಕೆಳಕಂಡ ವಿಳಾಸಕ್ಕೆ ಪತ್ರ ಅಥವಾ ಈ-ಮೇಲ್ ಮುಖಾಂತರ ನಮಗೆ ಕಳುಹಿಸಬಹುದು.

ನಮ್ಮ ವಿಳಾಸ: ಸಂಪಾದಕರು, ಅಯ್ಯೋ ಪ್ರಾಬ್ಲಂ ಕಚೇರಿ ವಿಭಾಗ, ವಿಜಯವಾಣಿ, ನಂ. 24, ಶ್ರೀ ಸಾಯಿರಾಮ್ ಟವರ್ಸ್, 5ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು - 560018.

email:vijayavanikir@gmail.com
ದೂರವಾಣಿ: 88844 31913
ಫ್ಯಾಕ್ಸ್: 08026257464

ಜತೆಗೆ ರಸ್ತೆಯಲ್ಲಿ ಸಂಚರಿಸುವವರಿಗೆ ಮತ್ತು ಅಕ್ಕಪಕ್ಕದ ಮನೆಗಳವರಿಗೆ ಧೂಳಿನ ಅಭಿಷೇಕವಾಗಿ ಗ್ರಾಮಸ್ಥರು ಕಾಯಿಲೆಗಳಿಗೆ ತುತ್ತಾಗುವಂತಾಗಿದೆ. ಇಷ್ಟಾದರೂ ಲೋಕೋಪಯೋಗಿ ಇಲಾಖೆ ಅಧಿಕಾರಿಗಳು ಜನರ ಸಂಕಷ್ಟ ಗಮನಿಸುತ್ತಿಲ್ಲ. ಗುತ್ತಿಗೆದಾರರ ಮೇಲೆ ಒತ್ತಡ ತಂದು ಕಾಮಗಾರಿ ಬೇಗ ಮುಗಿಸುವಂತೆ ಮಾಡುವ ಕಾಳಜಿಯನ್ನೂ ತೋರಿಸುತ್ತಿಲ್ಲ. ಶಾಸಕ ವರ್ತೂರು ಪ್ರಕಾಶ್ ಅವರು ತಮ್ಮ ತೋಟದ ಮನೆಗೆ ಹೋಗಲು ಪ್ರತಿದಿನ ಇದೇ ರಸ್ತೆಯಲ್ಲಿ ಓಡಾಡುತ್ತಿದ್ದರೂ ಅವರಾದರೂ ಲೋಕೋಪಯೋಗಿ ಇಲಾಖೆ ಅಧಿಕಾರಿಗಳಿಗೆ ಕಿವಿಹಿಂಡಿ ಬೇಗ ಕೆಲಸ ಮಾಡುವಂತೆ ಮಾಡುವ ಆಸಕ್ತಿ ವಹಿಸದೆ ಇರುವುದು ದುರ್ದೈವದ ಸಂಗತಿ.

। ಕೆ.ಮುರಳಿ, ಕೆ.ವಿ.ನವೀನ್‌ಕುಮಾರ್
ಬೆಗ್ಲಿಹೊಸಹಳ್ಳಿ


## ಇಂಟೆಗ್ರಲ್ ಕೋಚ್ ಫ್ಯಾಕ್ಟರಿ

ಭಾರತದ ರಾಷ್ಟ್ರಪತಿಗಳ ಪರವಾಗಿ, ದಿ ಡೆ. ಚೀಫ್ ಇಲೆಕ್ಟ್ರಿಕಲ್ ಇಂಜಿನಿಯರ್/ಇಎಂಯು, ಇಂಟೆಗ್ರಲ್ ಕೋಚ್ ಫ್ಯಾಕ್ಟರಿ, ಇವರು ಕೆಳಕಂಡ ಕಾಮಗಾರಿಗಾಗಿ ಮೊಹರಾದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

**ಕಾಮಗಾರಿ ಹೆಸರು ಮತ್ತು ಟೆಂಡರ್ ಪ್ರಕಟಣೆ ಸಂಖ್ಯೆ**

1) 1)ಎಸ್‌ಪಿಎಆರ್‌ಟಿ, ಎಸಿ ಇಎಂಯು, ಕನ್ವೆನ್ಷನಲ್ ಎಸಿ (ಎಸ್‌ಜಿ) ಮತ್ತು ಮಿಲಿಟರಿ ಎಸಿಸಿಡಬ್ಲ್ಯೂ ಕೋಚ್‌ಗಳಲ್ಲಿ ವೈರಿಂಗ್ ಕಾಮಗಾರಿ ಜೊತೆಗೆ ಚೈನ್ನೈ ಐಸಿಎಫ್‌ನಲ್ಲಿ ಉಪಕರಣಗಳ ನಿರ್ವಹಣೆ ಮತ್ತು ಅನುಷ್ಠಾನ ಹಾಗೂ ಪ್ರಿ-ಟೆಸ್ಟಿಂಗ್ ಕಾಮಗಾರಿ. **ICF/CEE/AC/195 dt. 06.01.2016**

2) ಇಒಜಿ ಎಲ್‌ಹೆಚ್‌ಬಿ ಪವರ್ ಕಾರ್ ಕೋಚ್‌ಗಳಲ್ಲಿ ವೈರಿಂಗ್ ಕಾಮಗಾರಿ ಜೊತೆಗೆ ಚೈನ್ನೈ ಐಸಿಎಫ್‌ನಲ್ಲಿ ಉಪಕರಣಗಳ ನಿರ್ವಹಣೆ ಮತ್ತು ಅನುಷ್ಠಾನ ಹಾಗೂ ಪ್ರಿ-ಟೆಸ್ಟಿಂಗ್ ಕಾಮಗಾರಿ **ICF/CEE/LHB/196 dt. 06.01.2016**

3) ಇಒಜಿ ಎಲ್‌ಹೆಚ್‌ಬಿ ಕೋಚ್‌ಗಳಲ್ಲಿ (ಏಸಿ ಮತ್ತು ನಾನ್ ಏಸಿ) ವೈರಿಂಗ್ ಕಾಮಗಾರಿ ಜೊತೆಗೆ ಚೈನ್ನೈ ಐಸಿಎಫ್‌ನಲ್ಲಿ ಉಪಕರಣಗಳ ನಿರ್ವಹಣೆ ಮತ್ತು ಅನುಷ್ಠಾನ ಹಾಗೂ ಪ್ರಿ-ಟೆಸ್ಟಿಂಗ್ ಕಾಮಗಾರಿ. **ICF/CEE/LHB/197 dt. 06.01.2016**

| | | | |
|---|---|---|---|
| ಟೆಂಡರ್ ಮೌಲ್ಯ | 1) ₹ 1,36,71,510 | 2) ₹ 1,86,80,000 | 3) ₹ 2,90,75,000 |
| ಇಎಂಡಿ | 1) ₹ 2,18,360 | 2) ₹ 2,43,400 | 3) ₹ 2,95,380 |
| ಟೆಂಡರ್ ಫಾರಂಗಳನ್ನು ಸ್ವೀಕರಿಸುವ ಅಂತಿಮ ದಿನಾಂಕ / ಟೆಂಡರ್ ಫಾರಂಗಳನ್ನು ತೆರೆಯುವ ದಿನಾಂಕ | 1) 05.02.2016 14.30 ಗಂಟೆ 05.02.2016 14.45 ಗಂಟೆ | 2) 08.02.2016 14.30 ಗಂಟೆ 08.02.2016 14.45 ಗಂಟೆ | 2) 09.02.2016 14.30 ಗಂಟೆ 09.02.2016 14.45 ಗಂಟೆ |
| ಟೆಂಡರ್ ಪತ್ರಗಳ ಶುಲ್ಕ | 1) ₹ 5,000/- | 2) ₹ 5,000/- | 3) ₹ 10,000/- |

ಕೆಳಗೆ ನೀಡಲಾದ ಕಚೇರಿ ವಿಳಾಸದಲ್ಲಿ ಅಥವಾ ವೆಬ್‌ಸೈಟ್‌ನಲ್ಲಿ ಸಂಪೂರ್ಣ ವಿವರಗಳು ಲಭ್ಯವಿರುತ್ತವೆ

ಟೆಂಡರ್ ಪತ್ರಗಳನ್ನು ಖರೀದಿಸುವ ಸ್ಥಳ : ಆಫೀಸ್ ಆಫ್ ದಿ ಚೀಫ್ ಇಲೆಕ್ಟ್ರಿಕಲ್ ಇಂಜಿನಿಯರ್/ಫರ್., ನೆಲಮಹಡಿ, ಅಡ್ಮಿನ್. ಆಫೀಸ್/ಫರ್ನಿಶಿಂಗ್ ಡಿವಿಜನ್/ಐಸಿಎಫ್ ಚೆನ್ನೈ - 38.

ಟೆಂಡರ್ ಪತ್ರಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ವೆಬ್‌ಸೈಟ್: **www.icf.indianrailways.gov.in**

**ಡೆ. ಚೀಫ್ ಇಲೆಕ್ಟ್ರಿಕಲ್ ಇಂಜಿನಿಯರ್/ಇಎಂಯು**

ನಸು ನಗುವಿನೊಂದಿಗೆ ಗ್ರಾಹಕರ ಸೇವೆಯಲ್ಲಿ


### ಶಾಸಕ ಮಂಜುನಾಥಗೌಡ ಆರೋಪ । ಬೆಳ್ಳಾವಿಯಲ್ಲಿ ಡಾಂಬರೀಕರಣಕ್ಕೆ ಚಾಲನೆ

# ಅಭಿವೃದ್ಧಿಗೆ ಸಿಎಂ ಅಸಹಕಾರ



ಬೆಳ್ಳಾವಿ ಗ್ರಾಮದಲ್ಲಿ ಮಾಲೂರು-ಬೆಳ್ಳಾವಿ-ಕೊಂಡ್ರಹಳ್ಳಿ ರಸ್ತೆ ಡಾಂಬರೀಕರಣಕ್ಕೆ ಶಾಸಕ ಕೆ.ಎಸ್. ಮಂಜುನಾಥಗೌಡ ಭೂಮಿ ಪೂಜೆ ನೆರವೇರಿಸಿದರು. ಬೆಳ್ಳಾವಿ ಮಠದ ಪಟ್ಟದ ಶಿವಾಚಾರ್ಯ ಸ್ವಾಮೀಜಿ ಇದ್ದರು.

**ಮಡಿವಾಳ:** ಮಾಲೂರು-ಹೊಸಕೋಟೆ ರಸ್ತೆಯನ್ನು ಚತುಷ್ಪಥ ಮಾಡಲು ಮುಖ್ಯಮಂತ್ರಿಗೆ ಮನವಿ ಮಾಡಿದ್ದರೂ ಮಲತಾಯಿ ಧೋರಣೆ ಅನುಸರಿಸುತ್ತಿದ್ದಾರೆ ಎಂದು ಶಾಸಕ ಕೆ.ಎಸ್.ಮಂಜುನಾಥಗೌಡ ಭೂಮಿ ದೂರಿದರು.

ಬೆಳ್ಳಾವಿ ಗ್ರಾಮದಲ್ಲಿ ಮಾಲೂರು ರಸ್ತೆಯಿಂದ ಬೆಳ್ಳಾವಿ ಕೊಂಡ್ರಹಳ್ಳಿ ರಸ್ತೆ ಡಾಂಬರೀಕರಣಕ್ಕೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು.

ಶಾಸಕರ ಅನುದಾನದಲ್ಲಿ 20 ಲಕ್ಷ ರೂಪಾಯಿ ಹಾಗೂ ಗ್ರೀನ್ ವುಡ್ ಲೇಔಟ್ ರಾಘವ್ ಅವರಿಂದ 10 ಲಕ್ಷ ರೂಪಾಯಿ ನೆರವಿನಿಂದ ಕಾಮಗಾರಿ ತಿಂಗಳಲ್ಲಿ ಪೂರ್ಣಗೊಳಿಸಲಾಗುವುದು ಎಂದು ಶಾಸಕ ತಿಳಿಸಿದರು. ಬೆಳ್ಳಾವಿ ಮಠದ ರಸ್ತೆಯನ್ನು ಸಿಮೆಂಟ್ ರಸ್ತೆಯನ್ನಾಗಿ, 5 ಲಕ್ಷ ರೂಪಾಯಿ ವೆಚ್ಚದಲ್ಲಿ ಒಳಚರಂಡಿ ವ್ಯವಸ್ಥೆ ಕಾಮಗಾರಿ, ಗ್ರಾಮದಲ್ಲಿ ಸಮುದಾಯಭವನ ನಿರ್ಮಾಣ, ಗ್ರಂಥಾಲಯ ವ್ಯವಸ್ಥೆ ಮಾಡಲಾಗುವುದು ಎಂದು ತಿಳಿಸಿದರು.

> ಚಿಕ್ಕತಿರುಪತಿ ದೇವಾಲಯ ಹಾಗೂ ರಾಜಗೋಪುರ ಅಭಿವೃದ್ಧಿಗೆ ಸರ್ಕಾರದಿಂದ 4.80 ಕೋಟಿ ರೂಪಾಯಿ ಬಿಡುಗಡೆಯಾಗಿದೆ. ಶೀಘ್ರದಲ್ಲಿ ಕಾಮಗಾರಿಗೆ ಚಾಲನೆ ನೀಡಲಾಗುವುದು. ಎಲ್ಲ ಗ್ರಾಮಗಳಲ್ಲಿ ಕುಡಿಯುವ ನೀರಿನ ಶುದ್ಧೀಕರಣ ಘಟಕ ನಿರ್ಮಾಣ ಮಾಡಲಾಗುವುದು.
>
> । ಕೆ.ಎಸ್.ಮಂಜುನಾಥಗೌಡ ಶಾಸಕ

ಕ್ರಷರ್, ಭಾರಿ ಗಾತ್ರದ ವಾಹನ ಸಂಚಾರದಿಂದ ಹೊಸಕೋಟೆ-ಮಾಲೂರು ಮುಖ್ಯರಸ್ತೆ ಹಾಳಾಗಿದೆ. ಭಾರಿ ಸರಕು ಸಾಗಣೆ ವಾಹನಗಳನ್ನು ಪರಿಶೀಲಿಸಿ ಅಧಿಕಾರಿಗಳು ದಂಡ ವಿಧಿಸಬೇಕೆಂದು ಸೂಚಿಸಿದರು.

ಅಬ್ಬೇನಹಳ್ಳಿ ಮಾರ್ಗವಾಗಿ ಮಾಲೂರಿಗೆ ಸಂಪರ್ಕ ಕಲ್ಪಿಸುವ ರಸ್ತೆ ಅಭಿವೃದ್ಧಿ ಪಡಿಸಲು ಹೊಂಡ ಕಂಪನಿ ಜತೆಗೆ ಮಾತನಾಡಿ ಆದಷ್ಟು ಬೇಗನೆ ದುರಸ್ತಿಗೊಳಿಸಲಾಗುವುದು ಎಂದರು.

ಬೆಳ್ಳಾವಿ ಮಠದ ಪಟ್ಟದ ಶಿವಾಚಾರ್ಯ ಸ್ವಾಮೀಜಿ, ಗ್ರಾಪಂ ಅಧ್ಯಕ್ಷೆ ರಾಧಮ್ಮ ತಿಮ್ಮರಾಯಪ್ಪ, ಉಪಾಧ್ಯಕ್ಷ ಎಚ್.ಎನ್.ಕೃಷ್ಣಪ್ಪ, ಮಡಿವಾಳ ಗ್ರಾಪಂ ಅಧ್ಯಕ್ಷ ಕೆ.ಸಿ.ಲಿಂಗೇಶ್, ಪುರಸಭಾ ಸದಸ್ಯ ಆಲೂ ಮಂಜು, ಗ್ರೀನ್ ವುಡ್ ಲೇಔಟ್ ರಾಘವ್, ಡಿಸಿಸಿ ಬ್ಯಾಂಕ್ ನಿರ್ದೇಶಕ ಬಿ.ವಿ.ಸೋಮಣ್ಣ, ಗ್ರಾಪಂ ಸದಸ್ಯರಾದ ಎಂ.ವೆಂಕಟೇಶಪ್ಪ, ಆನಂದರೆಡ್ಡಿ, ಎನ್. ವೆಂಕಟೇಶಪ್ಪ, ಮುಖಂಡರಾದ ಚಂದ್ರಶೇಖರ್, ಬಿ.ವಿ.ವೀರಭದ್ರಯ್ಯ, ಬಿ.ವಿಜಯಕುಮಾರ್, ರುದ್ರೇಶ್, ಸುರೇಶ್, ಬಚ್ಚೇಗೌಡ, ನಾರಾಯಣಸ್ವಾಮಿ, ಗುತ್ತಿಗೆದಾರ ಚಂದ್ರಶೇಖರ್ ಇದ್ದರು.